


ಮಿದುಳಿನ ಭಾಗಗಳು ಪ್ರೇಮಜ್ವರದಿಂದ ನರಳುವವರಲ್ಲಿಯೂ ಉದ್ದೀಪನಗೊಂಡಿರುತ್ತದೆ ಎಂದು ಮಿದುಳನ್ನು ಸ್ಕ್ಯಾನ್ ಮಾಡುವುದರ ಮೂಲಕ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ!

## ಅವನೇ/ಅವಳೇ ಏಕೆ?

ಪ್ರಿಯಕರ/ಪ್ರಿಯತಮೆಯನ್ನು ಹುಡುಕಿಕೊಳ್ಳಲು ಲಕ್ಷಾಂತರ ಆಯ್ಕೆಗಳಿರುತ್ತವೆ. ಅವರಲ್ಲಿ ಒಬ್ಬರ ಕಡೆಗೆ ಮಾತ್ರ ನಾವೆಲ್ಲಾ ಹೇಗೆ ಆಕರ್ಷಿತರಾಗುತ್ತೇವೆ? ಮಾನವಶಾಸ್ತ್ರಜ್ಞೆ ಹೆಲನ್ ಫಿಷರ್ 'why him, why her' ಎಂಬ ಪುಸ್ತಕದಲ್ಲಿ ಸಂಶೋಧನೆಯಿಂದ ಹೊರಬಂದ ತೀರ್ಮಾನಗಳನ್ನು ಮಂಡಿಸಿದ್ದಾರೆ.

ಒಂದೇ ರೀತಿಯ ಕೌಟುಂಬಿಕ ಸಾಮಾಜಿಕ ಆರ್ಥಿಕ ಹಿನ್ನೆಲೆ, ರೂಪ, ವಯಸ್ಸು, ಆಸಕ್ತಿಗಳು, ವಿದ್ಯಾಭ್ಯಾಸದ ಮಟ್ಟ ಇರುವವರ ಮಧ್ಯೆ ಪ್ರೀತಿಯುಂಟಾಗುವ ಸಾಧ್ಯತೆಗಳು ಹೆಚ್ಚು. ಇದು ಒಂದು ಹಂತದವರೆಗೆ ನಿಜ ಕೂಡಾ. ಆದರೆ ಎಲ್ಲಾ ಪ್ರೇಮ ಪ್ರಕರಣಗಳಿಗೆ ಇದು ಅನ್ವಯವಾಗುವುದಿಲ್ಲ.

ಮಿದುಳಿನ ಪ್ರಮುಖ ರಾಸಾಯನಿಕಗಳ ಆಧಾರದ ಮೇಲೆ ಎಲ್ಲರನ್ನೂ ನಾಲ್ಕು ರೀತಿಯ ವ್ಯಕ್ತಿತ್ವಗಳಾಗಿ ವಿಂಗಡಿಸಬಹುದೆಂದು ಹೆಲನ್‌ಫಿಷರ್ ವಿವರಿಸುತ್ತಾರೆ. ಆವಿಷ್ಕಾರಿಗಳು (ಡೋಪಮೈನ್), ನಿರ್ಮಾಪಕರು (ಸೆರೋಟೋನಿನ್), ನಿರ್ದೇಶಕರು (ಟೆಸ್ಟೋಸ್ಟರೋನ್) ಮತ್ತು ಸಂಧಾನಕಾರರು (ಆಕ್ಸಿಟೋಸಿನ್ ಮತ್ತು ಈಸ್ಟ್ರೋಜೆನ್)–ಇವೇ ಆ ನಾಲ್ಕು ವಿಭಾಗಗಳು. ಈ ಗುಂಪುಗಳ ಮಧ್ಯೆ ಹೇಗೆ ಆಕರ್ಷಣೆಯುಂಟಾಗುತ್ತದೆ ಎನ್ನುವುದು ಸಂಕೀರ್ಣವಾದ ವಿವರಣೆಯಾಗುತ್ತದೆ. ಬಾಲ್ಯದ ಅನುಭವಗಳ ಆಧಾರದ ಮೇಲೆ ನಮ್ಮ ತಲೆಯಲ್ಲಿ ಪ್ರೇಮನಕಾಶೆಯೊಂದರ ರಚನೆಯಾಗಿರುತ್ತದೆ.

## ತಿರಸ್ಕೃತ ಪ್ರೀತಿ

ಒಮ್ಮುಖವಾದದ್ದಾದರೂ ಸರಿ, ಬದುಕಿನ ಯಾವುದಾದರೂ ಹಂತದಲ್ಲಿ ಪ್ರೀತಿಯಿಂದ ತಿರಸ್ಕೃತರಾದ ಅನುಭವ ಹೆಚ್ಚಿನವರಿಗೆ ಇರಲೇಬೇಕು. ಕೆಲವರು ತಾತ್ಕಾಲಿಕವಾಗಿ ಮತ್ತು ಇನ್ನೂ ಕೆಲವರು ದೀರ್ಘಕಾಲದವರೆಗೆ ಕಳೆದುಕೊಂಡ ಪ್ರೇಮದ ನೆನಪುಗಳಲ್ಲಿ ಇರುತ್ತಾರೆ.

ಪ್ರೇಮತಿರಸ್ಕೃತರು ವಿರಹ, ದುಃಖ, ಹತಾಶೆ, ನಿರಾಸೆ, ಕೋಪ ಹೀಗೆ ಎಲ್ಲಾ ಋಣಾತ್ಮಕ ಭಾವನೆಗಳ ಖಜಾನೆಯಂತಿರುತ್ತಾರೆ. ಮನಃಶ್ಶಾಸ್ತ್ರಜ್ಞರು ತಿರಸ್ಕೃತ ಪ್ರೇಮಿಗಳ ಮನಸ್ಥಿತಿಯನ್ನು ಎರಡು ಹಂತಗಳಲ್ಲಿ ಗುರುತಿಸುತ್ತಾರೆ. ಮೊದಲನೆಯದು ನಿರಾಕರಣೆ/ಪ್ರತಿಭಟನೆ ಮತ್ತು ಎರಡನೆಯದು ಒಪ್ಪಿಕೊಳ್ಳುವಿಕೆ/ಹತಾಶೆ.

ಪ್ರೇಮಿಯನ್ನು ಕಳೆದುಕೊಳ್ಳುತ್ತಿದ್ದೇನೆ ಎನ್ನುವ ಪ್ರಥಮ ಅನುಭವದಲ್ಲಿಯೇ ಎಲ್ಲರೂ ವಿಹ್ವಲರಾಗುತ್ತಾರೆ. ಸಾಮಾಜಿಕ ಬಾಂಧವ್ಯದ ಕೊಂಡಿಯೊಂದು ಕಳಚಿದಾಗ ಎಲ್ಲಾ ಸಸ್ತನಿಗಳೂ ಇಂತಹ ಮಾನಸಿಕ ಸ್ಥಿತಿಯಲ್ಲಿರುತ್ತಾರೆ ಎಂದು ಸಂಶೋಧನೆಗಳಿಂದ ಕಂಡುಬಂದಿದೆ. ಮಿದುಳಿನಲ್ಲಿ ಹೆಚ್ಚುವ ಡೋಪಮೈನ್